ಅ) ಕಾಮಗಾರಿ ಎಂದಿನಿಂದ ಪ್ರಾರಂಭವಾಗುತ್ತದೆ;

ಇ) ಶಿಂಗಟಾಯನಕೇರಿ ಕೆರೆಗೆ ಅಡಿಗಲ್ಲು ಹಾಕಿ ಎಷ್ಟು ವರ್ಷಗಳಾದವು;

ಈ) ಕಾಮಗಾರಿ ಎಂದಿನಿಂದ ಪ್ರಾರಂಭವಾಗುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಮುರಡಿ ಕೆರೆಗೆ ದಿನಾಂಕ 30-5-1999ರಂದು ಅಡಿಗಲ್ಲು ಹಾಕಿದ್ದು, 3 ವರ್ಷ ಆಗಿರುತ್ತದೆ.

ಆ) ಅಂದಾಜು ಪತ್ರಿಕೆಗೆ ಮಂಜೂರಾತಿ ದೊರೆತಿದ್ದು, ಭೂ ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಪೂರ್ಣಗೊಂಡ ನಂತರ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಇ) ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಶಿಂಗಟರಾಯನ ಕೆರೆಗೆ ದಿನಾಂಕ 30-5-1999 ರಂದು ಅಡಿಗಲ್ಲು ಹಾಕಿದ್ದು, 3 ವರ್ಷ ಆಗಿರುತ್ತದೆ.

ಈ) ಭೂ ಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಪೂರ್ಣಗೊಂಡ ನಂತರ ನಿಯಮಾನುಸಾರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ಸರ್ಕಾರದ ಕೆಲಸವನ್ನು ಉತ್ತಮವಾಗಿ ಮಾಡುತ್ತಿರುವವರನ್ನು ಗುರುತಿಸಿ ಗೌರವಿಸುವುದು

1535 (1920) ಶ್ರೀ ಅಭಯಚಂದ್ರ ಕೆ : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ವತಿಯಿಂದ ಎಲ್ಲಾ ಇಲಾಖೆಯಲ್ಲಿ ಉತ್ತಮ ಸರಕಾರಿ ಸೇವೆಯನ್ನು ಮಾಡುತ್ತಿರುವವರನ್ನು ಪ್ರತಿ ವರ್ಷ ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆಯೇ;

ಆ) ಉತ್ತಮ ಸೇವೆಗಾಗಿ ಗುರುತಿಸಿ ಪ್ರಶಸ್ತಿ ನೀಡಲಾಗುತ್ತಿರುವ ಇಲಾಖೆಗಳು ಯಾವುವು;

ಇ) ಇತರ ಇಲಾಖೆಗಳು ಉತ್ತಮ ಸೇವೆ ಗುರುತಿಸಿ ಗೌರವಿಸದೆ ಇರಲು ಕಾರಣಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಪುರಸಭೆ ನೌಕರರನ್ನು ಖಾಯಂ ಮಾಡುವುದು

1536 (1922) ಶ್ರೀ ಅಭಯಚಂದ್ರ ಕೆ (ಮೂಡಬಿದ್ರೆ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುರಸಭೆಗಳಲ್ಲಿ ಕಳೆದ 10 ವರ್ಷಕ್ಕಿಂತ ಮೇಲ್ಪಟ್ಟು ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರನ್ನು ಖಾಯಂ ಮಾಡದಿರಲು ಕಾರಣವೇನು?

ಆ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 10 ವರ್ಷಕ್ಕಿಂತ ಮೇಲ್ಪಟ್ಟು ಸೇವೆ ಸಲ್ಲಿಸಿರುವವರ ವಿವರಗಳನ್ನು ಸರ್ಕಾರಕ್ಕೆ ನೀಡಿರುವರೇ?

ಇ) ಸರ್ಕಾರದ ನಿಯಮದಂತೆ 10 ವರ್ಷ ಮೇಲ್ಪಟ್ಟು ಗುತ್ತಿಗೆ ಆಧಾರದಲ್ಲಿ ಸೇವೆ

ಸಲ್ಲಿಸಿರುವವರನ್ನು ಸರ್ಕಾರಿ ಸೇವೆಯಲ್ಲಿ ಖಾಯಂಗೊಳಿಸುವ ಅವಕಾಶವಿರುವಾಗ ಈ ನೌಕರರನ್ನು ಖಾಯಂಗೊಳಿಸದಿರಲು ಕಾರಣವೇನು?

ಶ್ರೀ ಎಸ್. ಕುಮಾರ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ನಗರಾಭಿವೃದ್ಧಿ ಇಲಾಖೆಯು ದಿನಾಂಕ 1-1-86ನ್ನು ದಿನಗೂಲಿ ನೌಕರರ ಸಕ್ರಮಾತಿಗೆ ಗಡುವು ದಿನಾಂಕವೆಂದು ನಿಗದಿಗೊಳಿಸಿರುತ್ತದೆ. ಈ ದಿನಾಂಕಕ್ಕೆ ಮೊದಲು ದಿನಗೂಲಿಯ ಮೇಲೆ ನೇಮಕವಾಗಿರುವವರ ಸೇವೆಯನ್ನು ಸಕ್ರಮಗೊಳಿಸುವುದು ಸರ್ಕಾರದ ನೀತಿಯಾಗಿರುತ್ತದೆ.

ಆ) ಹೌದು

ಇ) (ಅ)ಗೆ ನೀಡಿರುವ ಉತ್ತರ ದನ್ವಯ ದಿನಾಂಕ 1-1-86ರ ನಂತರದ ಅವಧಿಯಲ್ಲಿನ ನೌಕರರನ್ನು ಖಾಯಂಗೊಳಿಸಲು ಅವಕಾಶವಿರುವುದಿಲ್ಲ.

ಮುಲ್ಕಿಗೆ ನೀರು ಸರಬರಾಜು ಮಾಡುವ ಪ್ರಮುಖ ಬಾವಿಯು ಕುಸಿದು ಬಿದ್ದಿರುವ ಬಗ್ಗೆ

1537 (1924) ಶ್ರೀ ಅಭಯಚಂದ್ರ ಕೆ (ಮೂಡಬಿದ್ರೆ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿಗೆ ನೀರು ಸರಬರಾಜು ಮಾಡುವ ಪ್ರಮುಖ ಬಾವಿಯು ಕುಸಿದು ಬಿದ್ದುದರಿಂದ ಕುಡಿಯುವ ನೀರಿನ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮಳೆಗಾಲದಲ್ಲಿ ನೀರು ಪೂರೈಕೆ ತೊಂದರೆಯಾಗದಂತೆ ಸರ್ಕಾರವು ಯಾವ ಕ್ರಮವನ್ನು ಕೈಗೊಳ್ಳುವುದು?

ಇ) ಈ ಬಾವಿಯ ಪುನರ್ ನಿರ್ಮಾಣಕ್ಕೆ ಸರ್ಕಾರದಿಂದ ವಿಶೇಷ ಅನುದಾನ ಕೊಡಲಾಗುವುದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಬಂದಿದೆ

ಆ) ಕುಸಿದ ಬಾವಿಯಿಂದ ಮುಲ್ಕಿ ಪಟ್ಟಣದ ಬಪ್ಪನಾಡು (ಕಾನ್ವೆಂಟ್) ಬಳಿ ಇರುವ ಮೇಲ್ಮಟ್ಟದ ಜಲಸಂಗ್ರಹಾಗಾರಕ್ಕೆ ನೀರನ್ನು ಪೂರೈಸಲಾಗುತ್ತಿತ್ತು. ಬರ ಪರಿಹಾರ ಯೋಜನೆ 2002ರ ಅಡಿಯಲ್ಲಿ ಬಪ್ಪನಾಡು (ಕಾನ್ವೆಂಟ್) ಮೇಲ್ಪಟ್ಟದ ಜಲಸಂಗ್ರಹಾಗಾರದ ಹತ್ತಿರವಿರುವ ಅಕ್ಕಸಾಲಿಗರ ಕೇರಿ ರಸ್ತೆಯಲ್ಲಿ ಹೊಸ ಕೊಳವೆ ಬಾವಿ ಕೊರೆಯಲಾಗಿದ್ದು, ಇದರಲ್ಲಿ ಗಂಟೆಗೆ 1200 ಗ್ಯಾಲನ್ ನೀರು ದೊರೆತಿರುತ್ತದೆ. ಈ ಕೊಳವೆ ಬಾವಿಗೆ ನಗರ ಪಂಚಾಯತ್ ವತಿಯಿಂದ 5.00 ಹೆಚ್.ಪಿ ಸಾಮರ್ಥ್ಯದ ಪವರ್ ಪಂಪ್ ಮಾಡಿ ಅಲ್ಲಿಂದ ಸದರಿ ಪ್ರದೇಶಕ್ಕೆ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಮುಲ್ಕಿ ನಗರಕ್ಕೆ ಶಾಶ್ವತ ನೀರು ಸರಬರಾಜು ಒದಗಿಸುವ ಯೋಜನೆಗೆ ಸರ್ಕಾರವು ತನ್ನ ಆದೇಶ ಸಂಖ್ಯೆ ನಆಇ 15 ಯುಡಬ್ಲ್ಯೂಎಸ್ 98, ದಿನಾಂಕ 16.1.2002ರಲ್ಲಿ ರೂ. 412.36 ಲಕ್ಷ ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಸಲುವಾಗಿ ಟೆಂಡರನ್ನು ಈಗಾಗಲೇ ಕರೆಯಲಾಗಿದೆ. ಗುತ್ತಿಗೆದಾರರನ್ನು ನೇಮಿಸಿದ ಕೂಡಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ಈ ಯೋಜನೆ ಪೂರ್ಣಗೊಂಡ ನಂತರ ಮುಲ್ಕಿ ಪಟ್ಟಣಕ್ಕೆ ಶಾಶ್ವತ ನೀರು ಸರಬರಾಜು ವ್ಯವಸ್ಥೆ ಒದಗಿಸಬಹುದಾಗಿದೆ.